## ಕಥೆ



**ನಾಗೇಶ್ ಜೆ. ನಾಯಕ**

ಕಲೆ: ಸುರೇಶ ಅರ್ಕಸಾಲಿ

# ತುಂಡು ನೆಲದ ನೋವು



'ಹೊತ್ತ ಕಳೀತಂದ್ರ ಮನೀ ಮುಂದ ಬಂದ ನಿಲ್ಲು ಬೋರೆಗೌಡಗ ಏನ ಹೇಳೂದಪಾ ದೇವ್ರ...' ಎಂದು ಕೆಂಚಪ್ಪ, ತಡರಾತ್ರಿವರೆಗೂ ಊರಿನ ಅಗಸಿ ಕಟ್ಟೆಯ ಮೇಲೆ ಹಣೆಗೆ ಕೈಹಚ್ಚಿ ಕೂತುಬಿಟ್ಟಿದ್ದ. ಎಷ್ಟೊತ್ತಿನವರೆಗೂ ಮಲಗಲು ಯತ್ನಿಸಿದರೂ ಕಣ್ಣು ಒಂಚೂರು ಮುಚ್ಚಿರಲಿಲ್ಲ. ಮುಚ್ಚಲು ಬೋರೆಗೌಡ ಕೊಟ್ಟ ಎಚ್ಚರಿಕೆ ಬಿಟ್ಟರೆ ತಾನೆ? ಅದೆಷ್ಟೇ ಕಣ್ಣು ಮುಚ್ಚಿ ನಿದ್ರಿಸಲು ಶತ ಪ್ರಯತ್ನಪಟ್ಟರೂ, ಬೋರೆಗೌಡ ಮುಲಾಜಿಲ್ಲದೆ ಊರ ಜನರ ಮುಂದೆ ಬಾಯಿಗೆ ಬಂದಂತೆ ಮಾತಾಡಿದ್ದು ನೆನಪಿಗೆ ಬಂದು ಎಚ್ಚರಾಗಿಬಿಡುತ್ತಿತ್ತು. ಇವನ ಹೊರಳಾಟ ಕಂಡು ಪಕ್ಕದಲ್ಲೇ ಮಲಗಿದ್ದ ಹೆಂಡತಿ ಪಾರವ್ವ, 'ಅದ್ಯಾಕಿಂಗ ಹೊರಳಾಡಕತ್ತೀ ಹಾಸಿಗಿ ಮ್ಯಾಗ... ನಿದ್ದೀ ಬರವಾಲ್ತೇನು?' ಎಂದು ಪ್ರಶ್ನೆ ಮಾಡಿದ್ದಕ್ಕೆ ಏನೂ ಹೇಳಲಾಗದೆ ಎದ್ದು ಊರ ಅಗಸಿಗೆ ಬಂದು ಕೂತಿದ್ದ ಕೆಂಚಪ್ಪ.

ಗದಗ ಜಿಲ್ಲೆಯ ಬಸಾಪೂರು ಎಂಬ ಹಳ್ಳಿಯಲ್ಲಿ ಎರಡು ಮಕ್ಕಳ ಜೊತೆ, ಇದ್ದ ತುಂಡು ಜಮೀನಿನಲ್ಲಿ ಗುಡಿಸಲು ಹಾಕಿಕೊಂಡು ಬದುಕು ಕಟ್ಟಿಕೊಳ್ಳಲು ಹೆಣಗಾಡುತ್ತಿದ್ದ ಕೆಂಚಪ್ಪ. ಎರಡು ವರ್ಷದಿಂದ ಮಳೆ ಎಂಬುದು ಮರೀಚಿಕೆಯಾಗಿ, ಉತ್ತಿ, ಬಿತ್ತಿದ್ದ ಜೋಳದ ಬೆಳೆ ಕೈಗೆ ಬರದೆ ಕಂಗಾಲಾಗಿದ್ದ. ದೊಡ್ಡ ಮಗ ಶಿವಾನಂದನನ್ನು ಗದಗಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಡಿಗ್ರಿ ಓದಿಸುತ್ತಿದ್ದ. ಮಗಳು ಅಂಬುಜಾ ಪಕ್ಕದ ಅಸುಂಡಿ ಗ್ರಾಮದಲ್ಲಿ ಹತ್ತನೇ ತರಗತಿ ಕಲಿಯುತ್ತಿದ್ದಳು. ಊರ ಧಣಿ ಬೋರೆಗೌಡನ ಬಳಿ ಬೀಜ, ಗೊಬ್ಬರಕ್ಕೆಂದು ಪಡೆದ ಸಾಲದ ಜೊತೆ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಾಡಿದ ಸಾಲವೂ ಸೇರಿ, ಬಡ್ಡಿ, ಚಕ್ರಬಡ್ಡಿ ಸಮೇತ ಬೆಳೆದು ಲೆಕ್ಕಕ್ಕೆ ಸಿಗದ